ಸಮಾಚಾರ ಸಣ್ಣದಲ್ಲ

ನೀರಾವರಿಗೆ ಸಹಾಯಧನ

ಚಾಮರಾಜನಗರ: ತೋಟಗಾರಿಕೆ ಇಲಾಖೆಯಿಂದ ಸೂಕ್ಷ್ಮ ಹನಿ ನೀರಾವರಿ (ಡ್ರಿಪ್ ಇರಿಗೇಷನ್) ಪದ್ಧತಿ ಅಳವಡಿಕೆಗೆ ಶೇ.90 ರಷ್ಟು ಸಹಾಯ ಧನ ನೀಡಲು ಪ.ಜಾತಿ ಪಂಗಡದ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ಆರ್ಥಿಕ ವರ್ಷ ಅಂತ್ಯಕ್ಕೆ ಬಂದಿರುವುದರಿಂದ ಈ ಕೂಡಲೇ ಆಸಕ್ತ ರೈತ ಬಾಂದವರು ಅಗತ್ಯ ದಾಖಲೆಗಳೊಂದಿಗೆ ಅರ್ಜಿ ನಮೂನೆ, ಭಾವ ಚಿತ್ರ, ಪಹಣಿ , ಕಂಪನಿಯಿಂದ ದರಪಟ್ಟಿ ಮತ್ತು ನಕ್ಷೆ, ಚೆಕ್ ಬಂದಿ, ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್, ಬ್ಯಾಂಕ್ ಅಕೌಂಟ್ ಪಾಸ್ ಪುಸ್ತಕದ ಜೆರಾಕ್ಸ್, ರೇಷನ್ ಕಾರ್ಡ್, ಜಾತಿ ಪ್ರಮಾಣ ಪತ್ರ, ದೂರವಾಣಿ ಸಂಖ್ಯೆ, ರೇಷ್ಮೆ ಮತ್ತು ಕೃಷಿ ಇಲಾಖೆಯಿಂದ ಬಾಕಿ ಪ್ರಮಾಣ ಪತ್ರ, ಮಣ್ಣು ಮತ್ತು ನೀರಿನ ಪರೀಕ್ಷಾ ವರದಿ, ನೀರಿನ ಮೂಲದ ವಿವರ ಇತ್ಯಾದಿ. ದರಪಟ್ಟಿ ನಕ್ಷೆಯನ್ನು ಇಲಾಖಾ ಅನುಮೋದಿತ ಕಂಪನಿಯವರಿಂದ ಮಾತ್ರ ಪಡೆದು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಆಯಾ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಲು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಹಣ ಎಣಿಕೆ 25ಕ್ಕೆ

ಚಾಮರಾಜನಗರ: ಹನೂರು ತಾಲೂಕಿನ ಪ್ರಸಿದ್ಧ ಯಾತ್ರಾಸ್ಥಳ ಮಹದೇಶ್ವರ ಬೆಟ್ಟದ ಮಲೆಮಹದೇಶ್ವರಸ್ವಾಮಿ ದೇವಸ್ಥಾನದ ಗೋಲಕಗಳ ಹಣ ಎಣಿಕೆ ಕಾರ್ಯವು ಫೆ.25ರಂದು ನಡೆಯಲಿದೆ. ಬೆಳಗ್ಗೆ ಮಹದೇಶ್ವರ ಬೆಟ್ಟದ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣ ಕಟ್ಟಡದ ಮೊದಲ ಮಹಡಿಯ ವಿಶ್ರಾಂತಿ ಗೃಹದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಿಬ್ಬಂದಿ ಸಹಯೋಗದೊಂದಿಗೆ ನಡೆಯಲಿದೆ ಎಂದು ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಕೋವಿಡ್ ಲಸಿಕೆ ಪಡೆಯಲು ಸೂಚನೆ

ಚಾಮರಾಜನಗರ: ಮುಂಚೂಣಿ ಕಾರ್ಯಕರ್ತರಿಗೆ ಕೋವಿಡ್-19 ಲಸಿಕೆ ನೀಡುವ ಕಾರ್ಯ ಪ್ರಗತಿಯಲ್ಲಿದ್ದು ಫೆ.24ರ ಒಳಗೆ ಎಲ್ಲಾ ಆರೋಗ್ಯ ಕಾರ್ಯಕರ್ತರು ಹಾಗೂ ಕೋವಿಡ್-19 ಮುಂಚೂಣಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು ಸಂಬಂಧ ಪಟ್ಟ ಇಲಾಖಾ ಮುಖ್ಯಸ್ಥರು, ಸಿಬ್ಬಂದಿ ಕಡ್ಡಾಯವಾಗಿ ಲಸಿಕೆ ಪಡೆಯುವಂತೆ ಜಿಲ್ಲಾಧಿಕಾರಿ ಡಾ.ಎಂ.ಆರ್. ರವಿ ಸೂಚಿಸಿದರು. ಕೋವಿಡ್ ಲಸಿಕೆ ಪಡೆಯಲು ಈಗಾಗಲೇ ಜಿಲ್ಲೆಯಲ್ಲಿ 3775 ಮುಂಚೂಣಿ ಕಾರ್ಯಕರ್ತರು ನೋಂದಣಿಯಾಗಿದ್ದಾರೆ. ಈಗಾಗಲೇ 1092 ಮಂದಿ ಮಾತ್ರ ಲಸಿಕೆ ಪಡೆದಿದ್ದಾರೆ. ಈಗಾಗಲೇ ಕೋವಿಡ್ ಲಸಿಕೆ ಪಡೆಯಲು ಹೆಸರು ನೊಂದಾಯಿಸಿಕೊಂಡಿರುವ ಅಧಿಕಾರಿ, ನೌಕರರು, ಆರೋಗ್ಯ, ಆಶಾ ಕಾರ್ಯಕರ್ತೆಯರು ತಪ್ಪದೇ ನಿಗದಿಪಡಿಸಿರುವ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಪಡೆಯಬೇಕು ಎಂದು ತಿಳಿಸಿದರು.

ಸಾಮಾನ್ಯ ಸಭೆ ಮಾ.2ರಂದು

ಚಾಮರಾಜನಗರ: ಜಿಲ್ಲಾ ಪಂಚಾಯಿತಿಯ ಸಾಮಾನ್ಯ ಸಭೆಯು ಅಧ್ಯಕ್ಷರಾದ ಎಂ. ಅಶ್ವಿನಿ ಅವರ ಅಧ್ಯಕ್ಷತೆಯಲ್ಲಿ ಮಾ.2 ರಂದು ನಡೆಯಲಿದೆ. ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸಭೆ ಏರ್ಪಡಿಸಲಾಗಿದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

ಆತ್ಮವಿಶ್ವಾಸ ವೃದ್ಧಿಸಿ

ಚಾಮರಾಜನಗರ: ಯಾವುದೇ ಸಂದರ್ಭದಲ್ಲಿ ಎದುರಾಗಬಹುದಾದ ವಿಪತ್ತುಗಳನ್ನು ಪೂರ್ವ ಯೋಜಿತ ಸಿದ್ಧತೆಯೊಂದಿಗೆ ಎದುರಿಸಲು ಜಿಲ್ಲೆಯಲ್ಲಿ ರಚಿಸಲಾಗಿರುವ ವಿಪತ್ತು ನಿರ್ವಹಣ ಕ್ಷಿಪ್ರ ಕಾರ್ಯ ತಂಡವು ಜನರಲ್ಲಿ ಆತ್ಮ ವಿಶ್ವಾಸ ಉಂಟು ಮಾಡಬೇಕು ಎಂದು ಜಿಲ್ಲಾಧಿಕಾರಿ ಡಾ.ಎಂ.ಆರ್. ರವಿ ಸಲಹೆ ನೀಡಿದರು. ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ನೆಹರು ಯುವ ಕೇಂದ್ರದಿಂದ ಇದೇ ಮೊದಲ ಬಾರಿಗೆ ವಿಶೇಷವಾಗಿ ರಚನೆಯಾಗಿರುವ ವಿಪತ್ತು ನಿರ್ವಹಣಾ ಕ್ಷಿಪ್ರ ಕಾರ್ಯ ತಂಡದ ಮೂರು ದಿನಗಳ ತರಬೇತಿ ಕಾರ್ಯಾಗಾರದ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಯಾವುದೇ ವಿಪತ್ತು ಸಂದರ್ಭ ತಲೆದೋರಿದಾಗ ಜಿಲ್ಲೆಯ ಅಧಿಕಾರಿಗಳ ತಂಡ ಸನ್ನದ್ದವಾಗಿದ್ದರೂ ಸಹ ಅತ್ಯಂತ ಪರಿಣತಿ ಹೊಂದಿದ ರಾಜ್ಯ, ರಾಷ್ಟ್ರ ವಿಪತ್ತು ಪ್ರತಿಕ್ರಿಯೆ ತಂಡದ ಮೇಲೆ ಅವಲಂಬಿತವಾಗುವುದು ಸಾಮಾನ್ಯವಾಗಿದೆ ಎಂದರು.

ಮರಳಿನ ಟಿಪ್ಪರ್ ಪಲ್ಟಿ

ಉಳ್ಳಾಲ: ತಲಪಾಡಿ ಗಡಿಯಲ್ಲಿ ಅಕ್ರಮ ಮರಳು ಸಾಗಣೆ ಅವ್ಯಾಹತವಾಗಿರುವುದಕ್ಕೆ ಮತ್ತೊಂದು ತಾಜಾ ನಿದರ್ಶನ ಲಭಿಸಿದೆ. ತಲಪಾಡಿ ದೇವಿಪುರ ದುರ್ಗಾಪರಮೇಶ್ವರಿ ದೇವಸ್ಥಾನದ ಮುಂಭಾಗದಲ್ಲಿ ಅಕ್ರಮ ಮರಳನ್ನು ಸಾಗಿಸುತ್ತಿದ್ದ ಟಿಪ್ಪರ್ ಒಂದು ಚಾಲಕನ ನಿಯಂತ್ರಣ ತಪ್ಪಿ ಖಾಸಗಿ ಜಾಗದ ತೆಂಗಿನ ಮರಕ್ಕೆ ಡಿಕ್ಕಿ ಹೊಡೆದು ಪಲ್ಟಿ ಆಗಿ ಬಿದ್ದಿದ್ದು, ದೇವಸ್ಥಾನದಿಂದ ಹೊರಬರುತ್ತಿದ್ದ ಮಹಿಳೆ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿ ದ್ದಾರೆ. ತಲಪಾಡಿಯ ವಿಜಯಾ ಬ್ಯಾಂಕ್ ಬಳಿಯ ನದಿಯಿಂದ ದಿನ ನಿತ್ಯವೂ ಅಕ್ರಮವಾಗಿ ಮರಳನ್ನು ಎತ್ತಿ ತಲಪಾಡಿ ದುರ್ಗಾಪರಮೇಶ್ವರಿ ದೇವಸ್ಥಾನದ ಮುಂಭಾಗದಿಂದ ಕುಮ್ಕಿ ಜಾಗದಲ್ಲಿ ನಿರ್ಮಿಸಲಾದ ರಸ್ತೆಗಳ ಮೂಲಕ ಕೇರಳಕ್ಕೆ ಮರಳನ್ನು ಸರಬರಾಜು ಮಾಡಲಾಗುತ್ತಿದೆ. ಕಳೆದ ಜ.19 ರಂದು ಕಿನ್ಯ ಗ್ರಾಮದ ನಡುಕುಮೇರ್ ಪಡುವಳ್ ಫಾರ್ಮ್ ಬಳಿ ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ಟಿಪ್ಪರ್ ಮತ್ತು ಓಮ್ನಿ ಕಾರು ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ಓಮ್ನಿ ಕಾರು ಸವಾರರಿಬ್ಬರ ಕಾಲು ತುಂಡಾಗಿ ಗಂಭೀರ ಸ್ಥಿತಿಯಲ್ಲಿ ಆಸ್ಪತ್ರೆ ಸೇರಿದ ಘಟನೆ ನಡೆದಿತ್ತು. ಸೋಮವಾರ ಮಧ್ಯಾಹ್ನ ಮುಖ್ಯ ರಸ್ತೆ ತಪ್ಪಿಸಿ ತಲಪಾಡಿಯ ಒಳ ರಸ್ತೆಯಲ್ಲಿ ಮರಳು ಅಕ್ರಮವಾಗಿ ಸಾಗಾಟ ನಡೆಸುತ್ತಿದ್ದ ಟಿಪ್ಪರ್ ನಿಯಂತ್ರಣ ತಪ್ಪಿ ತೆಂಗಿನ ಮರಕ್ಕೆ ಡಿಕ್ಕಿ ಹೊಡೆದು ಪಲ್ಟಿ ಆಗಿ ಬಿದ್ದಿದೆ.

ಮಾಸಿಕ 2 ಸಾವಿರ ವೇತನ | 2 ವರ್ಷದಿಂದ ಸಿಬ್ಬಂದಿ ಅಳಲು ಕೇಳೋರಿಲ್ಲ

ಅನಿಪೂರ್ಣ ಸಿಬ್ಬಂದಿ ಸಂಬಳ ಅಪೂರ್ಣ

ರಂಗನಾಥ ಕೆ.ಮರಡಿ ತುಮಕೂರು

ಸರಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುವ ಅನಿಪೂರ್ಣ(ಡಿ ಗ್ರೂಪ್) ಸಿಬ್ಬಂದಿಗೆ ಕಳೆದ 2ವರ್ಷಗಳಿಂದ ಸಂಬಳವಿಲ್ಲದೆ ಜೀವನ ಅತಂತ್ರಗೊಂಡಿದೆ.

ಇಡೀ ರಾಜ್ಯದಲ್ಲಿ ಕೆಲಸ ಮಡುವ ಅನಿಪೂರ್ಣ ಸಿಬ್ಬಂದಿಗೆ ಮಾಸಿಕ 2 ಸಾವಿರ ವೇತನ ನೀಡಲಾಗುತ್ತದೆ. ಆದರೆ ಎರಡು ವರ್ಷದಿಂದ ಶಬರಿಯಂತೆ ಕಾಯುತ್ತಾ ಸಂಬಳ ಬರುತ್ತದೆ ಎಂಬ ವಿಶ್ವಾಸದಿಂದ ಕೆಲಸ ಮಾಡುತ್ತಿದ್ದರೂ ಪ್ರಯೋಜನವಾಗಿಲ್ಲ. ನೇಮಕ ಮಾಡಿಕೊಂಡಿರುವ ಕಾಲೇಜುಗಳ ಪ್ರಾಂಶುಪಾಲರು ಸಂಬಳ ನೀಡುವಂತೆ ಮೇಲಧಿಕಾರಿಗಳಿಗೆ ಪತ್ರ ಬರೆದಿದ್ದರೂ ಕರೋನಾ ನೆಪಹೇಳಿ ಜಾರಿಕೊಳ್ಳುತ್ತಿದ್ದಾರೆ.

ಸಿಡಿಸಿ ಫಂಡ್‌ನಲ್ಲಿ ಸಂಬಳ ನೀಡಬಹುದು: ಕಾಲೇಜು ಅಭಿವೃದ್ಧಿ ಸಮಿತಿಯ ಫಂಡ್‌ನಲ್ಲಿ ಅನಿಪೂರ್ಣ ಸಿಬ್ಬಂದಿಗೆ ಪ್ರಾಂಶುಪಾಲರು ಸಂಬಳ ನೀಡಬಹುದು. ಆದರೆ 2 ಸಾವಿರ ಸಂಬಳಕ್ಕೆ ಇಲಾಖೆಗೆ ಪತ್ರ ಬರೆದು ಕಾಲಹರಣ ಮಾಡುವುದು ಸರಿಯಲ್ಲ. ಸದರಿ ಸಿಬ್ಬಂದಿಗೆ ಇಲಾಖೆಯು ಫಂಡ್ ಮೀಸಲಿಡಬೇಕು. ಆದರೆ ಪ್ರಾಂಶುಪಾಲರು ಇಲಾಖೆಯ ಮೇಲೆ, ಇಲಾಖೆಯು ಪ್ರಾಂಶುಪಾಲರ ಮೇಲೆ ಸಬೂಬು ಹೇಳುವುದನ್ನು ಬಿಟ್ಟು ವೇತನ ನೀಡಲು ಕ್ರಮಕ್ಕೈಗೊಳ್ಳಬೇಕು.

ಅನಿಪೂರ್ಣಕ್ಕೆ ಅನುಮತಿ ಇಲ್ಲ: ನಿರ್ದೇಶನಾಲಯದ ಅಧಿಕಾರಿಗಳು ಅನಿಪೂರ್ಣ ಸಿಬ್ಬಂದಿಯನ್ನು ಕೆಲಸಕ್ಕೆ ತೆಗೆದುಕೊಳ್ಳದಂತೆ ಪ್ರಾಂಶುಪಾಲರಿಗೆ ಸೂಚಿಸಿದ್ದಾರೆ. ಖಾಲಿ ಇರುವ ಕಡೆ ಡಿ ಗ್ರೂಪ್ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳದಿದ್ದರೆ ಕಾಲೇಜುಗಳಲ್ಲಿ ಕೆಲಸ ಮಾಡುವವರು ಯಾರು? ಹಳೆಯ ಆದೇಶದಂತೆ ಪ್ರಾಂಶುಪಾಲರುಗಳು ಇಂತಹ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು ಕೆಲಸ ಮಾಡಿಸುತ್ತಿದ್ದಾರೆ. ಆದರೆ 2 ವರ್ಷದಿಂದ ನಯಾಪೈಸೆ ಸಂಬಳ ನೀಡಿಲ್ಲ, ಹೀಗಾದರೆ ಇವರು ಜೀವನ ನಿರ್ವಹಿಸುವುದು ಹೇಗೆ? ಇಲಾಖೆಯು ಇವರಿಗೆ ಸಂಬಳ ನೀಡಲಿ ಎಂದು ಹೆಸರೇಳದ ಪ್ರಾಂಶುಪಾಲರು ಆಗ್ರಹಿಸಿದ್ದಾರೆ.

ಈ ಬಗ್ಗೆ ಮಾಹಿತಿ ಪಡೆಯಲು ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶನಾಲಯದ ಅಧಿಕಾರಿಗಳು ಪತ್ರಿಕೆಯ ಸಂಪರ್ಕಕ್ಕೆ ಸಿಗಲಿಲ್ಲ.

ಕರ್ನಾಟಕ ಸರ್ಕಾರ
ಪದವಿ ಪೂರ್ವ ಶಿಕ್ಷಣ ಇಲಾಖೆ
Department of Pre University Education, Karnataka
DEPARTMENT OF PRE-UNIVERSITY EDUCATION
ನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಭವನ

ಏನಿದು ಅನಿಪೂರ್ಣ?

ಪದವಿಪೂರ್ವ ಶಿಕ್ಷಣ ಇಲಾಖೆಯು ಕೆಲವು ಸರಕಾರಿ ಪದವಿಪೂರ್ವ ಕಾಲೇಜುಗಳಿಗೆ ಡಿಗ್ರೂಪ್ ಹುದ್ದೆಯನ್ನು ಮಂಜೂರು ಮಾಡಿದೆ. ಅಂತಹ ಕಾಲೇಜುಗಳ ಪ್ರಾಂಶು ಪಾಲರು ಸ್ಥಳೀಯವಾಗಿ ಅವಶ್ಯಕತೆಯ ಆಧಾರದ ಮೇಲೆ ಡಿ ಗ್ರೂಪ್ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬಹುದು. ಇವರೇ ಅನಿಪೂರ್ಣ ಸಿಬ್ಬಂದಿ.

ಉಪನಿರ್ದೇಶಕರ ಇಲಾಖೆಗೆ ಅಪೂರ್ಣ ಸಿಬ್ಬಂದಿಯ ಬಗ್ಗೆ ಮಾಹಿತಿ ಇರುವುದಿಲ್ಲ. ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶನದಂತೆ ಮಂಜುರಾಗಿದ್ದು, ಖಾಲಿ ಇರುವ ಕಡೆ ಆಯಾ ಕಾಲೇಜಿನ ಪ್ರಾಂಶುಪಾಲರು ಇಂತಹ ಸಿಬ್ಬಂದಿಯನ್ನು ನೇಮಕ ಮಾಡಿ ಕೊಳ್ಳುತ್ತಾರೆ. ಇವರ ಬಗ್ಗೆ ನಮಗೆ ಮಾಹಿತಿ ಇಲ್ಲ.

– **ನರಸಿಂಹಮೂರ್ತಿ** ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ತುಮಕೂರು

ಎರಡು ವರ್ಷದಿಂದ ನಯಾ ಪೈಸೆ ವೇತನ ನೀಡಿಲ್ಲ. ಮಾಸಿಕ 2 ಸಾವಿರದಂತೆ 10 ತಿಂಗಳು ಮಾತ್ರ ಸಂಬಳ ಬರುತ್ತದೆ. ಕರೋನಾ ಸಂಕಷ್ಟಕ್ಕೆ ಸಿಲುಕಿ ಕಂಗಾಲಾಗಿರುವ ಅನಿಪೂರ್ಣ ಸಿಬ್ಬಂದಿಗೆ ಶೀಘ್ರವೇ ವೇತನ ನೀಡಿಜೀವನ ನಡೆಸಲು ಅನುಕೂಲ ಮಾಡಿಕೊಡಬೇಕು.

– ಹೆಸರೇಳದ ಅನಿಪೂರ್ಣ ಸಿಬ್ಬಂದಿ

ಉದ್ಯೋಗ ಕಲ್ಪಿಸಲು ಕಾರ್ಯಕ್ರಮ

ಚನ್ನರಾಯಪಟ್ಟಣ: ಕರೋನಾ ಸಂಕಷ್ಟದ ದಿನಗಳಲ್ಲಿ ಕೆಲಸವಿಲ್ಲದೆ ಕಂಗಲಾಗಿದ್ದ ವಿದ್ಯಾವಂತ ಯುವಕ- ಯುವತಿಯರಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಈ ಕಾರ್ಯಕ್ರಮದಿಂದ ನಿರುದ್ಯೋಗಿಗಳ ಭವಿಷ್ಯ ಉಜ್ವಲವಾಗಿ ಬೆಳಗಲಿ ಎಂದು ಶ್ರವಣಬೆಳಗೊಳ ಜೈನಮಠದ ಪೀಠಾಧ್ಯಕ್ಷ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಹೇಳಿದರು.

ಅವರು ತಾಲೂಕಿನ ಶ್ರವಣಬೆಳಗೊಳದ ಪೊಲೀಸ್ ಸಮುದಾಯ ಭವನದಲ್ಲಿ ಮನೋಹರ್ ಪ್ರತಿಷ್ಠಾನ ವತಿಯಿಂದ ಭಾನುವಾರ ಏರ್ಪಡಿಸಿದ್ದ, ಬೃಹತ್ ಉದ್ಯೋಗ ಮೇಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ವಿದ್ಯಾವಂತರಿಗೆ ಉದ್ಯೋಗ ಇಲ್ಲದಿರುವುದೇ ದೊಡ್ಡ ತಲೆನೋವಾಗಿ ಪರಿಣಮಿಸಿದೆ ಎಂದರು.

ಸಮಾಜದಲ್ಲಿ ನಿರುದ್ಯೋಗದ ಸಮಸ್ಯೆ ತಾಂಡವಾಡುತ್ತಿದೆ. ಸ್ಥಳೀಯ ಯುವಕ- ಯುವತಿಯರಿಗೆ ಸಾಧ್ಯವಾದಷ್ಟು ಅವಕಾಶ ನೀಡುವುದು ಸೂಕ್ತ. ಇತ್ತೀಚೆಗಿನ ದಿನಗಳಲ್ಲಿ ಕರೋನಾದಿಂದ ಕೆಲವೊಂದು ಪರಿವರ್ತನೆ ಉಂಟಾಗಿದ್ದು, ಮನೆಯಲ್ಲಿಯೇ ಕುಳಿತು ಕೆಲಸ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಸದ್ಯ ಒಳ್ಳೆಯ ಅವಕಾಶ ಸಿಕ್ಕಿದೆ ಉದ್ಯೋಗ ಅರಸಿ ವಲಸೆ ಹೋಗುವ ಆವಶ್ಯಕತೆಯಿಲ್ಲ ಎಂದು ತಿಳಿಸಿದರು. ಬಿಜಿಎಸ್ ಆಸ್ಪತ್ರೆ ಆರೋಗ್ಯಾಧಿಕಾರಿ ಓಂಪ್ರಕಾಶ್, ಮನೋಹರ್ ಪ್ರತಿಷ್ಠಾನ ಸಂಸ್ಥಾಪಕ ಮನೋಹರ್, ಶ್ರವಣ ಬೆಳಗೋಳ ಜನಾರ್ಧನ್, ಸುಂಡಹಳ್ಳಿ ಜನಾರ್ಧನ್, ಪಿಎಲ್‌ಡಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಮಧುಕುಮಾರ್, ಪಿಎಸ್‌ಐ ಆರ್.ಮಂಜುನಾಥ್ ಇದ್ದರು.

ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾಧುಸ್ವಾಮಿ ಗರಂ

ಎಂಜಿನಿಯರ್‌ಗಳಿಗೆ ಸಚಿವರ ತರಾಟೆ

ಶ್ರೀ ಡಾ. ಸಿ.ಎಂ ರಾಜೇಶ್‌ಗೌಡ ರವರು.
2020-21ನೇ ಸಾಲಿನ 2 ಮತ್ತು 3ನೇ ತ್ರೈಮಾಸಿಕ ಕೆ.ಡಿ.ಪಿ
ಪ್ರಗತಿ ಪರಿಶೀಲನಾ ಸಭೆಯಲ್ಲಿನಡೆವ ವರದಿ.

ಶಾಸಕ ಡಾ.ಸಿ.ಎಂ.ರಾಜೇಶ್‌ಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಜೆ.ಸಿ.ಮಾಧುಸ್ವಾಮಿ ಮಾತನಾಡಿದರು.

ಶಿರಾ: ಶಿರಾ ಬುಕ್ಕಾಪಟ್ಟಣ ರಾಷ್ಟ್ರೀಯ ಹೆದ್ದಾರಿ 234 ರಲ್ಲಿ ಫೆ.18ರಂದು ಬಸ್ ಅಪಘಾತದಿಂದ ಇಬ್ಬರು ಮೃತಪಟ್ಟು ಹಲವರು ಗಂಭೀರ ಗಾಯಗೊಂಡಿರುವುದಕ್ಕೆ ಹೆದ್ದಾರಿಯಲ್ಲಿ ಸೂಕ್ತ ರಸ್ತೆ ಫಲಕಗಳನ್ನು ಅಳವಡಿಸದೆ ಇರುವುದು ಮುಖ್ಯ ಕಾರಣ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಎಂಜಿನಿಯರ್‌ಗಳಿಗೆ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವ ಜೆ.ಸಿ.ಮಾಧುಸ್ವಾಮಿ ತರಾಟೆಗೆ ತೆಗೆದುಕೊಂಡ ಘಟನೆ ನಡೆಯಿತು.

ತಾಲೂಕು ಪಂಚಾಯಿತಿಯಲ್ಲಿ ಶಾಸಕ ಡಾ.ಸಿ.ಎಂ. ರಾಜೇಶ್‌ಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತಾನಾಡಿ, ಅವೈಜ್ಞಾನಿಕ ಕಾಮಗಾರಿಯಿಂದ ಹೆದ್ದಾರಿಯಲ್ಲಿ ಸರಣಿ ಅಪಘಾತ ಸಂಭವಿಸುತ್ತಿದೆ. ನಿಮಗೆ ಸರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗದಿದ್ದರೆ ಇಲ್ಲಿಂದ ಹೊರಹೋಗಿ ಎಂದು ಗುಡುಗಿದರು. ಸಭೆಯಲ್ಲಿ ಚಿತ್ರದುರ್ಗ ಜಿಲ್ಲೆಯ ಸಂಸದ ಎ.ನಾರಾಯಣಸ್ವಾಮಿ ಮಾತನಾಡಿ, ಇಲ್ಲಿಯವರೆಗೂ ನಿವೇಶನ ರಹಿತರು ಎಷ್ಟು ಇದ್ದಾರೆ ಇಲ್ಲಿಯವರೆಗು ಎಷ್ಟು ಜನರಿಗೆ ನಿವೇಶನ ಹಂಚಲಾಗಿದೆ ಹಾಗೂ ಇನ್ನೂ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವವರಿಗೆ ನಿವೇಶನ ಹಂಚಿಕೆ ಮಾಡುವುದರಲ್ಲಿ ವಿಳಂಬವಾಗುತ್ತಿದೆ ಏಕೆ? ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾ ಧಿಕಾರಿ ಲಕ್ಷ್ಮಣ್‌ಗೆ ಕೇಳಿದರು.

ಅದಕ್ಕೆ ಉತ್ತರಿಸಿದ ಅಧಿಕಾರಿ 8455 ನಿವೇಶನ ರಹಿತರು ಇದ್ದಾರೆ. ಹಾಗೂ 10 ಸಾವಿರ ವಸತಿ ರಹಿತರು ಇರುವುದಾಗಿ ಹಾಗೂ 1582 ಫಲಾನುಭವಿಗಳ ಪೈಕಿ 888 ಫಲಾನುಭವಿಗಳ ಆಧಾರ್ ಹಾಗೂ ಪಡಿತರ ಚೀಟಿ ಸಮಸ್ಯೆಯಿಂದ ನಿವೇಶನ ಹಂಚಿಕೆ ಬಾಕಿ ಇರುತ್ತದೆ ಎಂದು ಉತ್ತರಿಸಿದರು.

ಈ ಕೂಡಲೇ ಪಿ.ಡಿ.ಒ.ಗಳಿಗೆ ತಿಳಿಸಿ ಎಲ್ಲಾ ಗ್ರಾ.ಪಂ.ಯಲ್ಲಿ ಗುಡಿಸಲಿನಲ್ಲಿ ಹಾಗೂ ಶಿಥಿಲಗೊಂಡ ಮನೆಗಳಲ್ಲಿ ವಾಸಮಾಡುತ್ತಿರುವ ಕುಟುಂಬಗಳ ಮಾಹಿತಿಯನ್ನು ನೀಡಿದರೆ ಅವರಿಗೆ ವಸತಿ ಹಾಗೂ ನಿವೇಶನ ಕೊಡುವ ವ್ಯವಸ್ಥೆ ಮಾಡುವುದಾಗಿ ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಶಂಕರ್, ಅರಣ್ಯಾಧಿಕಾರಿ ರಾಧ, ಇವರುಗಳು ಕೆಡಿಪಿ ಸಭೆಗೆ ಸರಿಯಾದ ಅಂಕಿ- ಅಂಶ ನೀಡದೆ ತಪ್ಪು ತಪ್ಪಾಗಿ ನೀಡಿದ್ದನ್ನು ಪ್ರಶ್ನಿಸಿದ ಸಚಿವರು ಸಭೆಗೆ ಬರುವಾಗ ಅಂಕಿ- ಅಂಶಗಳ ಬಗ್ಗೆ ಇರುವ ವ್ಯತ್ಯಾಸ ಸಹ ನೋಡದೆ ಮಾಹಿತಿ ನೀಡಲು ಬಂದಿದ್ದೀರಲ್ಲ ಎಂದು ತರಾಟೆಗೆ ತೆಗೆದುಕೊಂಡರು.

ಜಿಲ್ಲಾ ಉಸ್ತುವಾರಿ ಸಚಿವ ಜೆ.ಸಿ.ಮಾಧುಸ್ವಾಮಿ, ಶಾಸಕ ಡಾ.ಸಿ.ಎಂ.ರಾಜೇಶ್‌ಗೌಡ, ಸಂಸದ ಎ.ನಾರಾಯಣಸ್ವಾಮಿ, ವಿಧಾನ ಪರಿಷತ್ ಸದಸ್ಯ ಎಂ.ಚಿದಾನಂದ್ ಗೌಡ, ತಿಪ್ಪೇಸ್ವಾಮಿ, ತಹಸೀಲ್ದಾರ್ ಮಮತ, ಡಿ.ವೈ. ಎಸ್.ಪಿ.ಕುಮಾರಪ್ಪ, ತಾ.ಪಂ.ಅಧ್ಯಕ್ಷ ಚಂದ್ರಯ್ಯ, ಜಿ.ಪಂ. ಸದಸ್ಯ ರಾಮಕೃಷ್ಣ, ಸ್ಥಾಯಿಸಮಿತಿ ಅಧ್ಯಕ್ಷ ತಿಮ್ಮಣ್ಣ ಇದ್ದರು.

ಅಭಿಮನ್ಯು, ಕೃಷ್ಣ ಆನೆಗಳ ನೆರವಿನೊಂದಿಗೆ ಕಾರ್ಯಾಚರಣೆ

ಹುಲಿ ಸೆರೆ ಕಾರ್ಯಾಚರಣೆ ಚುರುಕು

ಶ್ರೀಮಂಗಲ: ಟಿ.ಶೆಟ್ಟಿಗೇರಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಹುಲಿ ದಾಳಿಗೆ ಹಸು ಬಲಿಯಾಗಿದ್ದು, ಫೆ.21ರಂದು ಹುಲಿ ಸೆರೆ ಕಾರ್ಯಾಚರಣೆ ತಂಡದಿಂದ ಸೆರೆಯಾಗಿದ್ದ ಹುಲಿಯಿಂದ ನಿಟ್ಟುಸಿರು ಬಿಟ್ಟಿದ್ದ ಜನತೆ ಮತ್ತೆ ಆತಂಕಗೊಂಡಿದ್ದಾರೆ. ಪೊನ್ನಂಪೇಟೆ ಸಮೀಪ ಮತ್ತೂರು ಗ್ರಾಮದಲ್ಲಿ ಹುಲಿ ಪ್ರತ್ಯಕ್ಷವಾಗಿದ್ದು, ಶಾಲಾ ವಿದ್ಯಾರ್ಥಿ ಭಯದಿಂದ ಪ್ರಜ್ಞೆ ತಪ್ಪಿ ಕುಸಿದು ಬಿದ್ದಿರುವ ಘಟನೆ ನಡೆದಿದೆ.

ಎರಡು ಜನರನ್ನು ಬಲಿ ತೆಗೆದುಕೊಂಡಿದ್ದ ಹುಲಿಯನ್ನು ಸೆರೆ ಹಿಡಿಯಬೇಕು ಮತ್ತು ಗುಂಡಿಟ್ಟು ಕೊಲ್ಲಬೇಕೆಂದು ಸಾರ್ವಜನಿಕರು ಮತ್ತು ಸಂಘ ಸಂಸ್ಥೆಯ ಪ್ರಮುಖರು ಪ್ರತಿಭಟನೆ ನಡೆಸಿದ ಹಿನ್ನೆಲೆ ಅರಣ್ಯ ಇಲಾಖೆಯಿಂದ ಭಾನುವಾರ ಮಧ್ಯಾಹ್ನದ ನಂತರ ಹುಲಿ ಸೆರೆಗೆ ಕಾರ್ಯಾಚರಣೆ ಕೈಗೊಂಡಿತ್ತು. ಕಾರ್ಯಾಚರಣೆ ಕೈಗೊಂಡ ಬೆನ್ನಲ್ಲೇ ಮಂಚಳ್ಳಿ ಗ್ರಾಮದಲ್ಲಿ ಹುಲಿಯೊಂದು ಅರವಳಿಕೆ ಹಾರಿಸಿ ಸೆರೆ ಹಿಡಿಯಲಾಗಿತ್ತು. ಈ ಹುಲಿ ಸೆರೆಯಿಂದ ಈ ಭಾಗದ ಜನರು ನಿಟ್ಟುಸಿರು ಬಿಟ್ಟಿದ್ದರು.

ಫೆ.21 ರ (ಭಾನುವಾರ) ಬೆಳಗೆ ಟಿ. ಶೆಟ್ಟಿಗೇರಿ ಗ್ರಾಮದ ಕಾಮಿಕ ಮಹಿಳೆ ಚೆಣ್ಣಿ ಅವರ ಮೇಲೆ ಎರಗಿ ಬಲಿ ಪಡೆದಿದ್ದ ಸ್ಥಳದಿಂದ ಕೇವಲ ಅಂದಾಜು 1 ಕಿ.ಮೀ ಅಂತರದಲ್ಲಿ ಭಾನುವಾರ ರಾತ್ರಿ ತಾವಳಗೇರಿ ಗ್ರಾಮದ ದೇಕಮಾಡ ಪುಷ್ಪ ಅವರ ಮಿಶ್ರತಳಿಯ ಹಸುವನ್ನು ಕೊಟ್ಟಿಗೆಗೆ ನುಗ್ಗಿ ಕೊಂದಿದ್ದು, ಎತ್ತರದ ಗೇಟ್ ಇದ್ದ ಪರಿಣಾಮ ಅದನ್ನು ಎಳೆದೊಯ್ಯಲು ಸಾಧ್ಯವಾಗದೆ ತೆರಳಿದೆ. ಕೊಟ್ಟಿಗೆಯಲ್ಲಿ ಇನ್ನು ಎರಡು ಹಸುಗಳಿದ್ದು ಅವುಗಳ ಮೇಲೆ ಹುಲಿ ದಾಳಿ ಮಾಡಿಲ್ಲ. ಬೆಳಗ್ಗೆ ಹಾಲು ಕರೆಯಲು ಮನೆಯವರು ಬಂದಾಗ ಹುಲಿ ದಾಳಿ ಮಾಡಿರುವುದು ಗೊತ್ತಾಗಿದೆ. ಸ್ಥಳಕ್ಕೆ ಕಾರ್ಯಾಚರಣೆಯಲ್ಲಿರುವ ಹುಲಿ ಸೆರೆ ತಂಡ ಅಭಿಮನ್ಯು, ಕೃಷ್ಣ ಎಂಬ ಎರಡು ಸಾಕಾನೆಯೊಂದಿಗೆ ಆಗಮಿಸಿ ಹುಡುಕಾಟ ಕೈಗೊಂಡಿದ್ದಾರೆ.

ಇದರೊಂದಿಗೆ ಕೊಟ್ಟಿಗೆಯ ಸಮೀಪವೇ ಹುಲಿ ಸೆರೆಗೆ ಅರಣ್ಯ ಇಲಾಖೆಯ ತಂಡ ಬೋನ್ ಇರಿಸಿದೆ. ಸೋಮವಾರ ಬೆಳಗ್ಗೆ 11 ಗಂಟೆ ಸುಮಾರಿಗೆ ಟಿ.ಶೆಟ್ಟಿಗೇರಿ ಗ್ರಾಮದ ಚೆಟ್ರಂಡ ಪೂಣಚ್ಚ ಅವರ ತೋಟಕ್ಕೆ ಹುಲಿ ರಸ್ತೆಯಿಂದ ನುಗ್ಗಿರುವುದನ್ನು ಪ್ರತ್ಯಕ್ಷದರ್ಶಿಗಳು ಕಂಡಿದ್ದು, ಹುಲಿ ಕಾರ್ಯಾಚರಣೆ ತಂಡ ಅಲ್ಲಿಗೆ ತೆರಳಿದೆ.

ಪೊನ್ನಂಪೇಟೆಯಲ್ಲಿ ಹುಲಿ ಪ್ರತ್ಯಕ್ಷ: ಪೊನ್ನಂಪೇಟೆ ಮತ್ತು ಗ್ರಾಮದಲ್ಲಿ ಗಾಣಂಗಡ ಉಮೇಶ್ ಅವರ ತೋಟದಲ್ಲಿ ಹುಲಿ ಪ್ರತ್ಯಕ್ಷವಾಗಿದ್ದು ಶಾಲೆಗೆಂದು ತೆರಳುತ್ತಿದ್ದ ಬಾಲಕಿ ಪ್ರಜ್ಞಾಹೀನರಾಗಿ ಕುಸಿದು ಬಿದ್ದ ಘಟನೆ ನಡೆದಿದೆ. ಕೂಡಲೇ ಬಾಲಕಿಯನ್ನು ಗ್ರಾಮಸ್ಥರು ಪೊನ್ನಂಪೇಟೆ ರಾಮಕೃಷ್ಣ ಆಶ್ರಮ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋದಾಗ ಅಲ್ಲಿ ವೈದ್ಯರು ಲಭ್ಯವಿರದ ಕಾರಣ ಗೋಣಿಕೊಪ್ಪಲು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗೆ ದಾಖಲಿಸಲಾಗಿದೆ.

ತಾವಳಗೇರಿ ಗ್ರಾಮದಲ್ಲಿ ಹುಲಿ ಸೆರೆಗೆ ಬೋನ್ ಅಳವಡಿಸಿರುವುದು.

ತಾವಳಗೇರಿ ಗ್ರಾಮಕ್ಕೆ ಹುಲಿ ಸೆರೆಗೆ ಸಾಕಾನೆ ಆಗಮನ



ಅಯೋಧ್ಯಾ ಶ್ರೀರಾಮ ತೀರ್ಥಂ ಟ್ರಸ್ಟ್‌ನ ಮಧ್ಯ ಹಾಗೂ ದಕ್ಷಿಣ ಭಾರತದ ವಿಶ್ವಸ್ಥರಾದ ಉಡುಪಿ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಉಡುಪಿಯ ಕುಂಜಾರುಗಿರಿ ಅಂಬಡೆಪಾಡಿ ಗೋವಿಂದ ಭಟ್ಟರ ಗದ್ದೆಯಲ್ಲಿ 15 ನೇ ವರ್ಷದ 'ಗೋವಿಗಾಗಿ ಮೇವು' ಯೋಜನೆಯ ಪ್ರಯುಕ್ತ ಜೋಳದ ಬಿತ್ತನೆ ಕಾರ್ಯ ಮಾಡಿದರು.

ಕೀರ್ತನೆಗಳಲ್ಲಿ ಲೋಕಕಲ್ಯಾಣಾರ್ಥ ಸಾರ

ಮಂಡ್ಯ: ದಾಸಪರಂಪರೆಯ ಕೀರ್ತನೆಗಳಲ್ಲಿ ಲೋಕಕಲ್ಯಾಣಾರ್ಥದ ಸಾರವಿದೆ ಎಂದು ದಾಸರಪದಗಳ ವಿದ್ವಾನ್ ಮ.ಶಾ.ಸಂ. ವರಾಹ ಹರಿವಿಠ್ಠಲದಾಸ ಹೇಳಿದರು.

ಮಂಡ್ಯದ ಗಾಂಧಿಭವನದಲ್ಲಿ ಆಯೋಜಿಸಲಾಗಿದ್ದ, ಗುರುಪುರಂದರ ಸಾಂಸ್ಕೃತಿಕ ಟ್ರಸ್ಟ್‌ನ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೇಷ್ಠ ದಾಸಪರಂಪರೆಯ ಕೀರ್ತನೆಗಳಲ್ಲಿ ಲೋಕಕಲ್ಯಾಣಾರ್ಥ ಜೀವನ ನಡೆಸುವ ಸಾಹಿತ್ಯಸಾರವಿದೆ, ಸಂಸ್ಕಾರ, ಭಕ್ತಿ ಪ್ರತಿಬಿಂಬಿಸುವ ಸಂದೇಶದ ಸಂಗೀತವಿದೆ, ನೆಮ್ಮದಿ ಜೀವನಕ್ಕೆ ಕೀರ್ತನೆಗಳು ಮಾರ್ಗದರ್ಶನ ನೀಡುತ್ತವೆ ಎಂದರು.

ದಾಸ ಸಾಹಿತ್ಯ ಮನುಕೂಲಕ್ಕೆ ನೆಮ್ಮದಿ ಕೊಡುವ ಸಾಹಿತ್ಯ ಅಲ್ಲದೇ ಸಮಾಜ ದಲ್ಲಿರುವ ಅಂಕು- ಡೊಂಕುಗಳನ್ನು ಸುಧಾರಿಸುವ ಶಕ್ತಿ ಪುರಂದರ ದಾಸರ ಹಾಡುಗಳಲ್ಲಿವೆ, ಇವುಗಳನ್ನು ಸಂಗೀತ ಪ್ರಕಾರಗಳಲ್ಲಿ ಸಂಯೋಜಿಸಿ, ಲೋಕಕಲ್ಯಾಣಕ್ಕೆ ಸಮರ್ಪಿಸಲಾಗಿದೆ, ಪುರಂದರದಾರ ಸಾಹಿತ್ಯವಿಲ್ಲದೆ ಸಂಗೀತಗಾರರಾಗಲು ಸಾಧ್ಯವಿಲ್ಲ ಎನ್ನುವಷ್ಟು ಲೋಕ ಪ್ರಸಿದ್ಧವಾಗಿವೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕೀರ್ತನೆಕಾರರು, ಹರಿಕಥಾ ವಿದ್ವಾನ್‌ರು, ರಂಗಭೂಮಿ ಕಲಾವಿದರನ್ನು ಗಣ್ಯರು ಅಭಿನಂದಿಸಿದರು. ಬಳಿಕ ಗುರು ಪುರಂದರ ಕೀರ್ತನೆಗಳು, ಹರಿಕಥಾ ಪ್ರಸಂಗಗಳು ಪ್ರದರ್ಶನಗೊಂಡು ಸಭಿಕರನ್ನು ಭಕ್ತಿಸಾಗರಲ್ಲಿ ತೇಲಿಸಿದವು.

ಅಖಿಲ ಕರ್ನಾಟಕ ಕೀರ್ತನ ಕಲಾ ಪರಿಷತ್‌ನ ಅಧ್ಯಕ್ಷ ಎಸ್.ಎಲ್. ಲೋಕೇಶ್, ಟ್ರಸ್ಟ್ ಅಧ್ಯಕ್ಷ ತಬಲ ವಿದ್ವಾನ್ ಜಿ. ವೆಂಕಟೇಶ್, ತಬಲವಾದಕ ಜಿ.ಗಣೇಶ್, ಮೃದಂಗ ವಿದ್ವಾನ್ ಎಸ್. ಸುದಾರ್ಶನ್, ಕೀರ್ತನಕಾರ ನಾರಯಣಾಚಾರ್, ಡಾ.ಲಕ್ಷ್ಮಣದಾಸ, ಚೌಡಪ್ಪ, ಗಮಕಿ ಶೈಲಜಾ, ಕುಮಾರಸ್ವಾಮಿ, ಸಾವಿತ್ರಿ, ರಂಗಕರ್ಮಿ ಸಾತನೂರು ವೆಂಕಟೇಶ್, ಬ್ಯಾಂಕ್‌ವಿಜಿ, ಬಸವರಾಜು, ಪಿಟೀಲ್ ವಿದ್ವಾನ್ ಗುರುಮೂರ್ತಿ, ಕೀರ್ತನಕಾರ ಶಿವಾರ ಉಮೇಶ್ ಮತ್ತಿತರರಿದ್ದರು.

ಮಂಡ್ಯದ ಗಾಂಧಿಭವನದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಗುರುಪುರಂದರ ಸಾಂಸ್ಕೃತಿಕ ಟ್ರಸ್ಟ್‌ನ ಉದ್ಘಾಟನಾ ಸಮಾರಂಭವನ್ನು ವಿದ್ವಾನ್ ಮ.ಶಾ.ಸಂ. ವರಾಹ ಹರಿವಿಠ್ಠಲದಾಸ ಉದ್ಘಾಟಿಸಿದರು.

ಕೋಟಿ ಚೆನ್ನಯರಾಗಿ ಕೆಲಸ ಮಾಡುತ್ತೇವೆ

ಮಂಗಳೂರು: ನಾನು ಮತ್ತು ಅಭಯಚಂದ್ರ ಜೈನ್ ಅವರು ಕೋಟಿ- ಚೆನ್ನಯರಾಗಿ ಕೆಲಸ ಮಾಡುತ್ತೇವೆ ಎಂದು ಶಾಸಕ ಉಮಾನಾಥ್ ಕೋಟ್ಯಾನ್ ಹೇಳಿದರು. ಮೂಡುಬಿದಿರೆ ಕಂಬಳದ ಕಾರ್ಯಕ್ರಮದಲ್ಲಿ ಮಾತನಾಡಿ, ಈ ಹಿಂದೆ ಅಭಯಚಂದ್ರ ಜೈನ್ ಅವರು ಕಂಬಳವನ್ನು 10-15 ವರ್ಷ ಚೆನ್ನಾಗಿ ನಡೆಸಿಕೊಟ್ಟಿದ್ದೀರಿ. ಅಭಯಚಂದ್ರ ಜೈನ್ ಹಾಗೂ ಭಾಸ್ಕರ್ ಕೋಟ್ಯಾನ್ ಅವರ ಶ್ರಮದಿಂದ ಮೂಡುಬಿದಿರೆ ಕ್ಷೇತ್ರದಲ್ಲಿ ಕಂಬಳ ಆರಂಭವಾಗಿದೆ. 10 ಎಕರೆ ಜಾಗವನ್ನು ಕಂಬಳ ಸಮಿತಿಗೆ ನೀಡಿದ್ದಾರೆ ಅವರಿಗೆ ನನ್ನ ಅಭಿನಂದನೆಗಳು. ನಾವೆಲ್ಲರೂ ಜತೆಯಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳೋಣ. ನಾನು ಮತ್ತು ಅಭಯಚಂದ್ರ ಅವರು ಕೋಟಿ ಚೆನ್ನಯರಾಗಿ ಕೆಲಸ ಮಾಡುತ್ತೇವೆ. ರಾಜಕೀಯ ಏನಿದ್ದರೂ ಎಲೆಕ್ಷನ್ ಸಮಯದಲ್ಲಿ ಮಾತ್ರ ಉಳಿದ ಸಮಯ ನಾವೆಲ್ಲ ಒಗ್ಗಟ್ಟಾಗಿ ಕೆಲಸ ಮಾಡೋಣ ಎಂದರು. ಬಳಿಕ ಮಾತನಾಡಿದ ಅಭಯಚಂದ್ರ ಜೈನ್, ಬೇರೆ ಬೇರೆ ಕಾರ್ಯಕ್ರಮಗಳಿಗೆ ಜನರನ್ನು ಸೇರಿಸಲಾಗದೇ ಟೆಂಪೋದಲ್ಲಿ ಜನರನ್ನು ಕರೆದುಕೊಂಡು ಬರಬೇಕಾಗುತ್ತದೆ. ಆದರೆ, ಈ ಕಂಬಳಕ್ಕೆ ಅವರಾಗಿಯೇ ಬರುವ ಜನ ಸಮೂಹ ಇದು ತುಳುನಾಡಿನ ಒಂದು ವೈಶಿಷ್ಟ್ಯ. ಉಮನಾಥ್ ಕೋಟ್ಯಾನ್ ಅವರು ಬಹಳ ಒಳ್ಳೆಯ ರೀತಿಯಲ್ಲಿ ಕಂಬಳಕ್ಕೆ ಪ್ರೋತ್ಸಾಹ ನೀಡುತ್ತಾ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ ಎಂದರು.

ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಹೇಳಿಕೆ | ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಪುಸ್ತಕ ಬಿಡುಗಡೆ

ಸಂಶೋಧನಾ ಚಟುವಟಿಕೆ ಚುರುಕಿಗೆ ಕ್ರಮ

ವಿಶ್ವವಾಣಿ ಸುದ್ದಿಮನೆ ಮೈಸೂರು

ವಿಶ್ವವಿದ್ಯಾನಿಲಯದ ಎಲ್ಲ ವಿಭಾಗಗಳಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಚುರುಕುಗೊಳಿಸಲು ಹಾಗೂ ಸೌಲಭ್ಯಗಳನ್ನು ಒದಗಿಸಿಕೊಡುವುದರ ಕುರಿತು ಕಾರ್ಯಪ್ರವೃತ್ತರಾಗಿದ್ದೇವೆ. ಎಲ್ಲ ಸಂಶೋಧಕರು ಗಂಭೀರವಾಗಿ ತಮ್ಮ ಸಂಶೋಧನೆಯಲ್ಲಿ ತೊಡಗಿಕೊಳ್ಳಲಿ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಹೇಳಿದರು.

ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ ಹಾಗೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಆಯೋಜಿಸಿದ್ದ, ಪ್ರಚಾರೋಪನ್ಯಾಸ ಹಾಗೂ ಡಾ.ಆರ್.ಲೋಕೇಶ್ ಅವರ ಸಂಶೋಧನಾ ಕೃತಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಪುಸ್ತಕ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕೆಲಸದಿಂದ ಆತ್ಮತೃಪ್ತಿ: ವಿವಿ ಅಭಿವೃದ್ಧಿಗೆ ಎಲ್ಲರೂ ಶ್ರಮಿಸೋಣ. ನನಗೆ ಕೆಲಸ ಮಾಡುವ ಸಿಬ್ಬಂದಿ ಬೇಕು. ವ್ಯರ್ಥವಾಗಿ ಕಾಲ ಹರಣ ಮಾಡುವುದನ್ನು ಬಿಟ್ಟು ವಿವಿಯ ಎಲ್ಲ ಉದ್ಯೋಗಿಗಳು ಸಮರ್ಥವಾಗಿ ತಮ್ಮನ್ನು ತಮ್ಮ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು. ಉತ್ತಮವಾಗಿ ಕೆಲಸ ಮಾಡುವುದರಿಂದ ಆತ್ಮತೃಪ್ತಿ ದೊರೆಯುತ್ತದೆ, ವಿವಿಯು ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ ಎಂದರು.

ವಿಶ್ರಾಂತಿಗೆ ಜಾರುವವರು: ಬಹಳಷ್ಟು ಸಂಶೋಧಕರು ಪಿಎಚ್.ಡಿ. ಪದವಿ ಬಂದ ಮೇಲೆ ವಿಶ್ರಾಂತಿಗೆ ಜಾರುತ್ತಾರೆ. ಸಂಶೋಧನ ಪ್ರಬಂಧವನ್ನು ಪ್ರಕಟಿಸುವ ಗೊಡವೆಗೆ ಹೋಗುವುದಿಲ್ಲ. ಆದರೆ, ಲೋಕೇಶ್ ಅವರು ಹಾಗೆ ವಿಶ್ರಾಂತಿಗೆ ಜಾರದೇ, ತಮ್ಮ ಸಂಶೋಧನ ಮಹಾಪ್ರಬಂಧವನ್ನು ಪ್ರಕಟಣೆ ಮಾಡುವ ಪ್ರಯತ್ನ ಮಾಡಿರುವುದು ಉತ್ತಮ ಕಾರ್ಯ ಎಂದರು.

ಜ್ಞಾನವನ್ನು ಪ್ರಕಟಿಸುವ ಕಾರ್ಯವಾಗಲಿ: ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವ ಪ್ರೊ. ಆರ್.ಶಿವಪ್ಪ ಮಾತನಾಡಿ, ಮೈಸೂರು ವಿವಿ ದಾಖಲಿಸುವ ಕಾರ್ಯವನ್ನು ಉತ್ತಮವಾಗಿ ನಿರ್ವಹಿಸುತ್ತಿದೆ. ಬಹಳ ಹಿಂದೆಯೇ ನಿಯತಕಾಲಿಕೆಗಳ ಮೂಲಕ ವಿದ್ವತ್ ಜನರ ಅಭಿಪ್ರಾಯ, ಜ್ಞಾನವನ್ನು ದಾಖಲಿಸುವ, ಪ್ರಕಟಿಸುವ ಕಾರ್ಯವನ್ನು ಮಾಡಲಾಗಿದೆ ಎಂದರು.

ವಿಶೇಷ ಉಪನ್ಯಾಸ: ಕಾರ್ಯಕ್ರಮದಲ್ಲಿ ಹರಿದಾಸರ ಮುಂಡಿಗೆಗಳು ವಿಷಯ ಕುರಿತು ಬಳ್ಳಾರಿಯ ತೆಕ್ಕಲಕೋಟೆ ಸ.ಪ್ರ.ದ.ಕಾಲೇಜು ಸಹ ಪ್ರಾಧ್ಯಾಪಕ ಡಾ.ಮಾನಕರಿ ಶ್ರೀನಿವಾಸಾಚಾರ್ಯ, ಸಾವಯವ ಕೃಷಿ ಮತ್ತು ಬಹುಬೆಳೆ ಪದ್ಧತಿ ವಿಷಯ ಕುರಿತು ಸಂಸ್ಕೃತಿ ಚಿಂತಕ ಡಾ. ಚೆನ್ನಸ್ವಾಮಿ ವಡ್ಡಗೆರೆ ಉಪನ್ಯಾಸ ನೀಡಿದರು. ಕು.ಕ.ಅ.ಸಂಸ್ಥೆ ನಿರ್ದೇಶಕ ಪ್ರೊ.ಎಂ.ಬಿ.ಮಂಜುನಾಥ್, ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಪ್ರೊ.ಎನ್.ಎಂ.ತಳವಾರ ಇದ್ದರು.

ಡಾ.ಆರ್.ಲೋಕೇಶ್ ಅವರ ಸಂಶೋಧನಾ ಕೃತಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಪುಸ್ತಕ ಬಿಡುಗಡೆ ಮಾಡಲಾಯಿತು.

ಉಪನ್ಯಾಸ ಯಶಸ್ವಿ

ಪ್ರಚಾರೋಪನ್ಯಾಸ ಕಾರ್ಯಕ್ರಮವು ಅಪರೂಪ ಕಾರ್ಯಕ್ರಮವಾಗಿದ್ದು, ವಿಶ್ವಮಟ್ಟದಲ್ಲಿ ಮೈಸೂರು ವಿವಿ ಎಕ್ಸ್‌ಪೆರಿಮೆಂಟ್ ಎಂದು ಪ್ರಸಿದ್ಧಿ ಪಡೆದಿದೆ. ಪ್ರೊ.ಎನ್.ಎಂ. ತಳವಾರ ವರ್ಷದ ಅವಧಿಗೆ 25 ಪ್ರಚಾರೋಪನ್ಯಾಸಗಳಿಗೆ ಮನವಿ ಸಲ್ಲಿಸಿದ್ದರು. ಅವರ ಕ್ರಿಯಾಶೀಲತೆಯ ಮೇಲೆ ಭರವಸೆಯಿಟ್ಟು 25 ಉಪನ್ಯಾಸ ಕಾರ್ಯಕ್ರಮ ನಡೆಸಲು ಆಡಳಿತಾತ್ಮಕ ಮತ್ತು ಹಣಕಾಸಿನ ಅನುಮೋದನೆ ನೀಡಿದೆವು. ಈ ಯೋಜನೆ ಪ್ರಾಯಶಃ ಮುಕ್ಕಾಲುಪಾಲು ಯಶಸ್ವಿಯಾಗಿ ಪೂರೈಸಿದಿದ್ದಾರೆ. ಇನ್ನು ಐದಾರು ಕಾರ್ಯಕ್ರಮ ಬಾಕಿ ಉಳಿದಿರಬಹುದು ಎಂದು ಪ್ರೊ.ಜಿ.ಹೇಮಂತ್ ಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದರು.

ಪಂಚಮಸಾಲಿ ಮೀಸಲು ಕೇಂದ್ರದ ಗಮನಕ್ಕೆ ಬಂದಿಲ್ಲ

ಪುತ್ತೂರು: ರಾಜ್ಯದಲ್ಲಿ ಸುದ್ದಿಯಲ್ಲಿರುವ ಪಂಚಮಸಾಲಿ ಸಮಾಜಕ್ಕೆ ಮೀಸಲು ನೀಡುವ ವಿಚಾರ ಕುರಿತಂತೆ ಈ ತನಕ ಕೇಂದ್ರದ ಗಮನಕ್ಕೆ ಬಂದಿಲ್ಲ ಎಂದು ಕೇಂದ್ರ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಹೇಳಿದರು.



ಅವರು ಪುತ್ತೂರಿನಲ್ಲಿ ನಡೆದ ರಾಯಲ್ ಸಹಕಾರಿ ಸಂಘದ ಸನ್ಮಾನ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಲು ಆಗಮಿಸಿದ್ದರು. ಈ ಸಂದರ್ಭದಲ್ಲಿ ಮಾಧ್ಯಮಗಳಿಗೆ ಅಭಿಪ್ರಾಯ ನೀಡಿದ ಸಚಿವರು, ಪಂಚಮಸಾಲಿ ಸಮಾಜಕ್ಕೆ ಮೀಸಲು ನೀಡುವ ವಿಚಾರ ಈವರೆಗೆ ಕೇಂದ್ರದ ಗಮನಕ್ಕೆ ಬಂದಿಲ್ಲ. ಅಲ್ಲದೆ ಈ ವಿಚಾರದ ಬಗ್ಗೆ ಕೇಂದ್ರ ನಾಯಕರು ಈವರೆಗೂ ಚರ್ಚೆಯನ್ನೂ ನಡೆಸಿಲ್ಲ. ಜಾತಿ ಆಧಾರದಲ್ಲಿ ಮೀಸಲು ಕೊಡುವುದಕ್ಕೆ ವೈಯಕ್ತಿಕವಾಗಿ ನನ್ನ ವಿರೋಧವಿದೆ ಎಂದರು. ಯಾರು ಆರ್ಥಿಕವಾಗಿ ಹಿಂದುಳಿದಿದ್ದಾರೋ ಅವರಿಗೆ ಅವಕಾಶಗಳು ದೊರೆಯಬೇಕಿದೆ ಎನ್ನುವುದು ನನ್ನ ಅಪೇಕ್ಷೆಯಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ಜಾತಿ ಆಧಾರದಲ್ಲಿ ಮೀಸಲು ನೀಡಿದಲ್ಲಿ ಸಾಮಾಜಿಕ ಪರಿವರ್ತನೆ ಕಷ್ಟಸಾಧ್ಯ ಎಂದು ಹೇಳಿದರು. ಇತ್ತೀಚೆಗಿನ ದಿನಗಳಲ್ಲಿ ಜಾತಿ ಆಧಾರಿತ ಮೀಸಲು ಕೇಳುವ ಹೊಸ ಪ್ರಕ್ರಿಯೆ ಶುರುವಾಗಿದ್ದು, ಈ ವ್ಯವಸ್ಥೆ ಸಾಮಾಜಿಕ ಪರಿವರ್ತನೆಗೆ ಮಾರಕವಾಗಿದೆ ಎಂದರು. ಮೀಸಲು ಪಡೆದು ಉನ್ನತ ಸ್ಥಾನಕ್ಕೆ ತಲುಪಿದವರು ತನ್ನ ಸಮಾಜದ ಏಳಿಗೆಯನ್ನು ಮರೆಯುತ್ತಾರೆ. ಸಮಾಜ ಹಿಂದೆ ಬಿದ್ದು, ವ್ಯಕ್ತಿ ಮಾತ್ರ ಮುಂದೆ ಹೋಗುವಂತಹ ವ್ಯವಸ್ಥೆಗಳು ಆಗುತ್ತಿವೆ. ಇಂಥ ಘಟನೆಗಳು ಸಾಕಷ್ಟು ನಮ್ಮ ಮುಂದಿದೆ ಎಂದರು.